

# ಕೆಲಸವೇ ಮೊದಲ ಆಯ್ಕೆ: ರಾಗಿಣಿ

“ಕನ್ನಡ ಸಿನಿಮಾರಂಗದಲ್ಲಿ, ಹಾಡಿನ ದೃಶ್ಯದಲ್ಲಿ ಕಾಣಿಸಿಕೊಳ್ಳಲು ಹೀರೋಯಿನ್‌ಗಳು ಹಿಂಜರಿಯುತ್ತಿದ್ದರು. ‘ಐಟಂ ಗರ್ಲ್’ ಎಂಬ ಹಣೆಪಟ್ಟಿ ಅಂಟಿಕೊಳ್ಳಬಹುದೆಂಬ ಅಂಜಿಕೆಯಿಂದ ಹಾಗೆ ಮಾಡುತ್ತಿದ್ದರು. ನನಗೆ ಆ ಭಯ ಇರಲಿಲ್ಲ. ನನಗೆ ಯಾವುದೇ ಹಣೆಪಟ್ಟಿ ಕೊಟ್ಟರೂ ಅದನ್ನು ಹೊರಬಲ್ಲೆ. ಯಾರು ಏನೆಂದುಕೊಳ್ಳುತ್ತಾರೆ ಎನ್ನುವುದಕ್ಕಿಂತ ನನಗೆ ನನ್ನ ಕೆಲಸ ಮುಖ್ಯ. ಅದೇ ನನ್ನ ಮೊದಲ ಆಯ್ಕೆ” ಎಂದಿದ್ದಾರೆ ನಟಿ ರಾಗಿಣಿ ದ್ವಿವೇದಿ.

ತಮ್ಮ ಆಯ್ಕೆಗಳ ಬಗ್ಗೆ ಯಾರು ಏನೆಂದರೂ ಹೆಚ್ಚು ತಲೆಕೆಡಿಸಿಕೊಳ್ಳದೇ ಬೋಲ್ಡ್ ಆಗಿ ಕಾಣಿಸಿಕೊಳ್ಳುವವರು ರಾಗಿಣಿ. ಇದೀಗ ‘ಗಜರಾಮ’ ಸಿನಿಮಾದ ಹಾಡೊಂದಕ್ಕೆ ಹೆಜ್ಜೆ ಹಾಕುತ್ತಿದ್ದು, ಈ ಹಾಡು ಪ್ರಸಕ್ತ ವರ್ಷದ ಅತ್ಯುತ್ತಮ ‘ಮಾಸ್ ಸಾಂಗ್’ ಆಗಲಿದೆ ಎನ್ನುತ್ತಾರೆ.

ಹಲವು ಸಿನಿಮಾಗಳಲ್ಲಿ ವಿಶೇಷ ಹಾಡುಗಳಿಗೆ ನೃತ್ಯ ಮಾಡಿರುವ ರಾಗಿಣಿಗೆ ಈ ಹಾಡು ಮತ್ತಷ್ಟು ವಿಶೇಷ ಎನಿಸಿದೆ. ಅದಕ್ಕೆ ಕಾರಣವನ್ನೂ ಅವರೇ ವಿವರಿಸುತ್ತಾರೆ.

‘ಈ ಹಾಡು ಟ್ರೆಂಡ್ ಸೆಟ್ ಮಾಡುತ್ತದೆ. ಈ ಹಾಡನ್ನು ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ಚಿತ್ರೀಕರಿಸಲಾಗಿದೆ. ಈ ಹಾಡಿಗೆ ಆಫ್ರೊ ವೈಬ್ ಕೂಡ ಇದೆ. ಸಂಗೀತ ಸಂಯೋಜಕ ಮನೋಮೂರ್ತಿ ಹಾಗೂ ಕೊರಿಯೊಗ್ರಫರ್ ಬಿ. ಧನಂಜಯ್ ಅವರ ಜೊತೆ ಕೆಲಸ ಮಾಡಿದ್ದು ವಿಶೇಷ ಅನುಭವ. ಈ ಹಾಡನ್ನು ನನಗೆಂದೇ ಮಾಡಲಾಗಿದೆ. ಮೊದಲು ಡೇಟ್‌ಗಳ ಹೊಂದಾಣಿಕೆ ಆಗಿರಲಿಲ್ಲ. ನಾಲ್ಕು ತಿಂಗಳ ಅವಧಿ, ಸಿನಿಮಾ ತಂಡ ತಾಳ್ಮೆಯಿಂದ ನನಗಾಗಿ ಕಾದಿದೆ. ಅವರು ನನ್ನನ್ನು ಆಯ್ಕೆ ಮಾಡಿರುವುದು ನನಗೆ ತುಂಬಾ ಖುಷಿಯಾಗಿದೆ’ ಎಂದು ಸಂತಸದಿಂದ ಹೇಳಿಕೊಂಡಿದ್ದಾರೆ.

ಈ ಹಾಡಿನಲ್ಲಿ ರಾಗಿಣಿ ಎರಡು ಭಿನ್ನ ಲುಕ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದರೊಂದಿಗೆ, ಈ ವರ್ಷವೇ ತೆಲುಗು ಭಾಷೆಯಲ್ಲಿ ಚಿರಂಜೀವಿ ಅವರ ಜೊತೆ ಒಂದು ಹಾಡಿಗೂ ಹೆಜ್ಜೆ ಹಾಕುತ್ತಿದ್ದಾರೆ. ಕನ್ನಡದಲ್ಲಿ ಚಂದನ್ ಶೆಟ್ಟಿ ಜೊತೆ ಹಾಡಿಗೆ ನೃತ್ಯ ಮಾಡಿರುವುದು ಕೂಡ ಹಿಟ್ ಹಾಡುಗಳ ಪಟ್ಟಿಯಲ್ಲಿ ಸೇರಲಿದೆ. ದೊಡ್ಡ ಸ್ಟಾರ್‌ಗಳ ಜೊತೆ ಮಾತ್ರವಲ್ಲ, ಹೊಸ ಪ್ರತಿಭೆಗಳೊಂದಿಗೆ ಕಾಣಿಸಿಕೊಳ್ಳಲೂ ತಮಗೆ ಯಾವುದೇ ಹಿಂಜರಿಕೆ ಇಲ್ಲ ಎಂದು ಹೇಳಿಕೊಳ್ಳುತ್ತಾರೆ ರಾಗಿಣಿ.

‘ದೊಡ್ಡ ನಟರೊಂದಿಗೆ ಮಾತ್ರ ನಟಿಸುವುದಾಗಿ ನಿರ್ಧರಿಸಿದರೆ, ಹೊಸತನ, ಹೊಸ ಆಲೋಚನೆಗಳಿಂದ ವಂಚಿತರಾಗಬಹುದು. ಹೊಸಬರೊಂದಿಗೆ ಕೆಲಸ ಮಾಡಲು ನನಗೆ ಇಷ್ಟ’ ಎಂದು ಹೇಳಿದ್ದಾರೆ.



# ಬೆಳ್ಳಿತೆರೆಗೆ ‘ಟಗರು ಪಲ್ಯ’

ನೆನಪಿರಲಿ ಪ್ರೇಮ್ ಮಗಳು ಅಮೃತಾ ನಟನೆಯ ಮೊದಲ ಚಿತ್ರ ‘ಟಗರು ಪಲ್ಯ’, ಕೆಲವೇ ದಿನಗಳಲ್ಲಿ ತೆರೆಗೆ ಬರುತ್ತಿದೆ. ಪ್ರೇಮ್ ಪುತ್ರಿ ಹಾಗೂ ನಾಗಭೂಷಣ್ ನಾಯಕಿ–ನಾಯಕನಾಗಿ ನಟಿಸಿರುವ ‘ಟಗರು ಪಲ್ಯ’ ಇದೇ ಅಕ್ಟೋಬರ್ 27ಕ್ಕೆ ಬೆಳ್ಳಿತೆರೆಯಲ್ಲಿ ಮೆರವಣಿಗೆ ಹೊರಡಲಿದೆ.

ಡಾಲಿ ಧನಂಜಯ್ ನಿರ್ಮಾಣದ ಮೂರನೇ ಸಿನಿಮಾ ‘ಟಗರು ಪಲ್ಯ’ದ ಟೀಸರ್ ಹಾಗೂ ಎರಡು ಹಾಡುಗಳು ಈಗಾಗಲೇ ಹಿಟ್ ಆಗಿವೆ. ಹೀಗಾಗಿ ಸಿನಿಮಾ ಬಗ್ಗೆಯೂ ಬಹಳ ನಿರೀಕ್ಷೆ ವ್ಯಕ್ತಗೊಂಡಿದೆ. ಸಿನಿಮಾಗೆ ಉಮೇಶ್ ಕೆ. ಕೃಪ ಆ್ಯಕ್ಷನ್–ಕಟ್ ಹೇಳಿದ್ದಾರೆ.

‘ಟಗರು ಪಲ್ಯ’ ಸಿನಿಮಾದಲ್ಲಿ ನಾಗಭೂಷಣ ಹಾಗೂ ಅಮೃತಾ ಪ್ರೇಮ್ ಜೊತೆಗೆ ರಂಗಾಯಣ ರಘು, ತಾರಾ, ಶರತ್ ಲೋಹಿತಾಶ್ವ ಸೇರಿದಂತೆ ದೊಡ್ಡ ತಾರಾ ಬಳಗವೇ ಜೊತೆಯಾಗಿದೆ. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ಸಯೋಜನೆ ಮಾಡಿದ್ದು, ಎಸ್.ಕೆ. ರಾವ್ ಛಾಯಾಗ್ರಹಣ ಚಿತ್ರಕ್ಕಿದೆ. ಈಗಾಗಲೇ ಸಿನಿಮಾ ಪ್ರಚಾರ ಆರಂಭ ಆಗಿದ್ದು, ಪಕ್ಕಾ ಹಳ್ಳಿ ಸೊಗಡಿನ ಈ ಸಿನಿಮಾ, ಜನರಿಗೆ ಮೆಚ್ಚುಗೆಯಾಗುವ ಭರವಸೆಯನ್ನು ಚಿತ್ರತಂಡ ನೀಡಿದೆ.